# ಎಟಿಎಂ ರಕ್ಷಣೆಗೆ ಹೈಟೆಕ್ ವೀಡಿಯೊ,ಸೈರನ್ ವ್ಯವಸ್ಥೆ

■ **ವಿಕ ಸುದ್ದಿಲೋಕ** ಬೆಂಗಳೂರು

- ಎಟಿಎಂ ಕಳ್ಳರಿಗೆ ಸೈರನ್ ಮೂಲಕ ಎಚ್ಚರಿಕೆ
- ಕಳ್ಳತನಕ್ಕೆ ಯತ್ನಿಸುವಾಗಲೇ ಮಾತನಾಡಿ ಎಚ್ಚರಿಸಬಹುದು
- ಕೆಲವೇ ಕ್ಷಣಗಳಲ್ಲಿ ಬ್ಯಾಂಕ್ ,ಪೊಲೀಸರಿಗೆ ಮಾಹಿತಿ

ಎಟಿಎಂಗೆ ಕನ್ನ ತಡೆಯಲು ಹೈಟೆಕ್ ಅಲರಾಂ ಇರುವ ವ್ಯವಸ್ಥೆ ಜಾರಿಗೆ ಬಂದಿದೆ. ಮುಂಬಯಿ ಮೂಲದ ಸೆಕ್ಯುರೆನ್ಸ್ ಸಿಸ್ಟಮ್ಸ್ ಬೆಂಗಳೂರು ಸೇರಿದಂತೆ ದೇಶದ ನಾನಾ ಕಡೆಗಳಲ್ಲಿ 1,800 ಎಟಿಎಂಗಳಲ್ಲಿ ಇಂತಹ ತಂತ್ರಜ್ಞಾನವನ್ನು ಅಳವಡಿಸಿದೆ ಎಂದು ಕಂಪನಿಯ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ಉಡುಪ ಹೇಳಿದ್ದಾರೆ.

'ಎಟಿಎಂಗಳಲ್ಲಿ ಯಾವುದೇ ಅಪಾಯ ಉಂಟಾದಾಗ ಈ ಸಾಧನ ಎಚ್ಚರಿಕೆಯ ಗಂಟೆ ಬಾರಿಸುತ್ತದೆ. ಜತೆಗೆ ಆಡಿಯೊ ಮತ್ತು ವೀಡಿಯೊ ವ್ಯವಸ್ಥೆ ಇರುವುದರಿಂದ ಕಳ್ಳನ ಜತೆಗೆ ಮಾತನಾಡಲು, ಎಚ್ಚರಿಕೆ ನೀಡಲು ಸಾಧ್ಯವಾಗುತ್ತದೆ. ಪ್ರತಿ ಎಟಿಎಂಗೂ ಮುಂಬಯಿನಲ್ಲಿರುವ ಕಂಪನಿಯ ಕೇಂದ್ರ ನಿಗಾ ಘಟಕಕ್ಕೂ ಸಂಪರ್ಕವಿರುತ್ತದೆ. ಅಲ್ಲಿಂದಲೇ ಪಾತಕಿಗಳಿಗೆ ಎಚ್ಚರಿಕೆ ನೀಡಲಾಗುವುದು. ಏನಾದರೂ ಅಹಿತಕರ ಘಟನೆ ನಡೆದ ಕೆಲವೇ ಕ್ಷಣಗಳಲ್ಲಿ ಸಂಬಂಧಪಟ್ಟ ಬ್ಯಾಂಕ್ ಮತ್ತು ಪೊಲೀಸ್ ಠಾಣೆಗೆ ಮಾಹಿತಿ ನೀಡಲಾಗುವುದು' ಎಂದು ಸುನಿಲ್ ಉಡುಪ ಹೇಳಿದರು.

ದೇಶದ ಪ್ರಮುಖ ನಗರಗಳಲ್ಲಿ ಈಗಾಗಲೇ 1800ಕ್ಕೂ ಹೆಚ್ಚು ಎಟಿಎಂಗಳಲ್ಲಿ ಈ ನಿರಂತರ ನಿಗಾ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಇದರಿಂದ ಎಟಿಎಂ ಭದ್ರತೆಗೆ ಬ್ಯಾಂಕ್‌ಗಳಿಗೆ ತಗಲುವ ವೆಚ್ಚ ಕೂಡ ಕಡಿಮೆ. ಒಂದು ಎಟಿಎಂಗೆ ಮೂರು ಪಾಳಿಯಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸಲು ಬ್ಯಾಂಕ್‌ಗೆ ತಿಂಗಳಿಗೆ ಅಂದಾಜು 33 ಸಾವಿರ ರೂ. ವೆಚ್ಚವಾದರೆ, ಇಲ್ಲಿ 12 ಸಾವಿರ ರೂ. ಸಾಕಾಗುತ್ತದೆ ಎಂದು ಉಡುಪ ತಿಳಿಸಿದರು.

ಎಟಿಎಂ ಯಂತ್ರವನ್ನು ಕಳ್ಳರು ಕದಿಯಲು ಯತ್ನಿಸಿದರೆ, ಬಾಗಿಲು ಮುರಿಯಲು ಅಥವಾ ಗ್ರಾಹಕರ ಮೇಲೆ ಹಲ್ಲೆಗೆ ಯತ್ನಿಸಿದರೆ, ಅಥವಾ ಯಾವುದೇ ವ್ಯತ್ಯಾಸ ಕಂಡು ಬಂದರೆ ತಕ್ಷಣ ಅಲರಾಂ ಮೊಳಗುತ್ತದೆ. ಎಲ್ಲವೂ ವೈರ್‌ಲೆಸ್ ವ್ಯವಸ್ಥೆಯಲ್ಲಿರುವುದರಿಂದ ಪಾತಕಿಗಳಿಗೆ ಸಂಪರ್ಕವನ್ನು ಕಡಿತಗೊಳಿಸಲು ಸಾಧ್ಯವಾಗುವುದಿಲ್ಲ. ವಿದ್ಯುತ್ ಸಂಪರ್ಕಕ್ಕೆ ಮೂರು ಪರ್ಯಾಯ ಸಾಧನಗಳು ಇಲ್ಲಿವೆ. ಹೀಗಾಗಿ ವಿದ್ಯುತ್ ಕಡಿತದ ಸಮಸ್ಯೆ ಉಂಟಾಗುವುದಿಲ್ಲ. ಈಗಾಗಲೇ ಅಮೆರಿಕ, ಯುರೋಪ್ ಮುಂತಾದ ಕಡೆಗಳಲ್ಲಿ ಈ ತಂತ್ರಜ್ಞಾನ ಅಳವಡಿಸಲಾಗಿದೆ. ಇದೀಗ ಭಾರತದಲ್ಲಿ ಜನಪ್ರಿಯವಾಗುತ್ತಿದೆ ಎಂದರು.

ಬೆಂಗಳೂರಿನಲ್ಲಿ ಕಂಪನಿ 400 ಎಟಿಎಂಗಳಲ್ಲಿ ಈ ನಿಗಾ ವ್ಯವಸ್ಥೆಯಲ್ಲಿ ಜಾರಿಗೊಳಿಸಿದೆ.

ತಿಂಗಳಿಗೆ 2-3 ಎಟಿಎಂಗಳಲ್ಲಿ ಕಳ್ಳತನಕ್ಕೆ ಯತ್ನಿಸುತ್ತಿರುವ ಪ್ರಕರಣಗಳನ್ನು ವಿಫಲಗೊಳಿಸಲಾಗುತ್ತಿದೆ ಎಂದು ಸುನಿಲ್ ಉಡುಪ ಹೇಳಿದರು.